**ಓ ಎಸ್  99/2023 ಪಿಡಬ್ಲ್ಯೂ5**

**ಸಾಕ್ಷಿಯನ್ನು ದಿಃ  04.12.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ  ಪ್ರತಿವಾದಿ ಪರ ಶ್ರೀ ಎ ಜಿ ಪಿ ರವರಿಂದಃ**

ನನಗೆ ಕನ್ನಡ ಓದಲು ಮತ್ತು ಬರೆಯಲು ಸ್ವಲ್ಪ ಮಾತ್ರ ಬರುತ್ತದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಿಕೆಯ ಸಂಗತಿಗಳನ್ನು ನಾನೇ ಹೇಳಿ ಬರೆಸಿದ್ದೇನೆ.  ಫ್ರಾಸಾ 4 ಫ್ರಾಣೇಶ್ ನನ್ನ ಚಿಕ್ಕಪ್ಪ.  ಫ್ರಾಣೇಶ್ ರವರ ಜಮೀನಿನ ಸರ್ವೆ ನಂ. 78 ಆಗಿದೆ. ಆ ಜಮೀನಿನ ಪೂರ್ವಕ್ಕೆ ಚಂದ್ರೆ ಗ್ರಾಮದವರ ಜಮೀನು ಇದೆ. ಅವರ ಹೆಸರು ಗೊತ್ತಿಲ್ಲ. ಪಶ್ಚಿಮಕ್ಕೆಃ ಬೇವಿನಕುಪ್ಪೆ ರವರ ಜಮೀನು ಇದೆ. ಉತ್ತರಕ್ಕೆಃ ರಾಜಣ್ಣರವರ ಜಮೀನು ಇದೆ. ದಕ್ಷಿಣಕ್ಕೆಃ ರಸ್ತೆ ಇದೆ.

ವಾದಿಯು ಕೇಸು ಹಾಕಿರುವ ಜಮೀನಿನ ಸರ್ವೆ ನಂ. 79 ಆಗಿದೆ.  ಸರ್ವೆ ನಂ. 78 ಮತ್ತು  ಸರ್ವೆ ನಂ. 79 ಅಕ್ಕಪಕ್ಕದಲ್ಲಿ ಇವೆ ಎಂದರೆ ಸರಿ. ವಾದಿಯು ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವ ಹೊಂದಿರುವ ಬಗ್ಗೆ ಆರ್ ಟಿ ಸಿ ನೋಡಿದ್ದೇನೆ.  ಈಗ ಎರಡು ತಿಂಗಳ ಹಿಂದೆ ಆರ್ ಟಿ ಸಿ ನೋಡಿದ್ದೇನೆ. ಅದು ವಾದಿಯ ಹೆಸರಿನಲ್ಲಿ ಇತ್ತು. 2002 ರಿಂದ ಇಂದಿನವರೆಗೂ ಸಹ ಸರ್ವೆ ನಂ. 79 ರ ಆರ್ ಟಿ ಸಿ ಸರ್ಕಾರದ ಹೆಸರಿನಲ್ಲಿದೆಯೇ ಹೊರತು ವಾದಿಯ ಹೆಸರಿನಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಸರ್ಕಾರದವರು ಅರಣ್ಯ ಇಲಾಖೆಯ ಸುಪರ್ದಿಗೆ ನೀಡಿದ್ದು ಅವರು ಅದರಲ್ಲಿ ಅವರು ಹಣ್ಣಿನ ಮರಗಳು ಮತ್ತು ನೀಲಗಿರಿ ಮರಗಳನ್ನು ಬೆಳೆಸಿದ್ದಾರೆ ಎಂದರೆ ಸರಿಯಲ್ಲ.

ವಾದಿಯು ನಮ್ಮ ಪಕ್ಕದ ಊರಿನವರು. ದಾವಾ ಆಸ್ತಿ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ಸಹ ನಾನು ವಾದಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ದಾವಾ ಆಸ್ತಿಯ ಪಶ್ಚಿಮಕ್ಕೆಃ ಮಹಾದೇವಮ್ಮರವರ ಆಸ್ತಿ ಇದೆ. ಪೂರ್ವಕ್ಕೆಃ ನಿಂಗಮ್ಮರವರ ಆಸ್ತಿ ಇದೆ, ದಕ್ಷಿಣಕ್ಕೆಃ

ಸರ್ಕಾರಿ ಜಮೀನು, ಉತ್ತರಕ್ಕೆ: ರಸ್ತೆ. ಈ ಚಕ್ಕುಬಂದಿಯಲ್ಲಿನ ಆಸ್ತಿಯು ಅರಣ್ಯ ಇಲಾಖೆಗೆ ಸೇರಿದ್ದು ವಾದಿಯು ಆ ಚಕ್ಕುಬಂದಿಯಲ್ಲಿ ಸ್ವಾಧೀನಾನುಭವ ಹೊಂದಿಲ್ಲ ಎಂದರೆ ಸರಿಯಲ್ಲ. ಅರಣ್ಯ ಇಲಾಖೆ ಮತ್ತು ವಾದಿಯ ನಡುವೆ ಗಲಾಟೆ ನಡೆದು ವಾದಿಯ ವಿರುದ್ಧ ಪ್ರಕರಣ ದಾಖಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಪಾಂಡವಪುರ**